ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **14 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ಜೀವನ್ | ಸಿ.ಡಬ್ಲ್ಯೂ 4 |
| ತಂದೆಯ ಹೆಸರು | : ವೀರಭದ್ರ | ಪಿ.ಡಬ್ಲ್ಯೂ 3 |
| ವಯಸ್ಸು | : 25 ವರ್ಷ | |
| ಉದ್ಯೋಗ | : ಖಾಸಗಿ ಕೆಲಸ | |
| ವಾಸ ಸ್ಥಳ | : ಎಂ.ಸಿ.ಹ ಳ್ಳಿ | |

ದಿನಾಂಕಃ**28-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾಸಾ-1 ನನ್ನ ಅತ್ತೆಯ ಮಗ ಇರುತ್ತಾರೆ. ಚಾಸಾ-2, 3, 5 ರಿಂದ 7 ಇವರ ಪರಿಚಯ ಇದೆ. ಆರೋಪಿಗಳು ಕೂಡ ನನ್ನ ಸಂಬಂಧಿಕರು ಇರುತ್ತಾರೆ. 2022 ರ ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ತೋಟಕ್ಕೆ ನಾನು ಮತ್ತು ಕೆಲವು ಜನ ಕೂಲಿ ಕಾರ್ಮಿಕರು ಬೆಳಗಿನ ಹೊತ್ತು ತೆಂಗಿನಕಾಯಿ ಕೀಳಲು ಹೋಗಿದ್ದೆವು. ಆ ಸಮಯಕ್ಕೆ ಆರೋಪಿತರು ತೋಟಕ್ಕೆ ಬಂದು ಚಾಸಾ-1 ಇವರೊಂದಿಗೆ ಜಗಳ ತೆಗೆದು ಹಲ್ಲೆ ಮಾಡಿರುತ್ತಾರೆ. ಅವರುಗಳು ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿದ ಕಾರಣ ಚಾಸಾ-1 ಈತನ ಎಡ ಕಣ್ಣಿನ ಮೇಲೆ ಗಾಯ ಆಗಿರುತ್ತದೆ. ನಾನು ಮತ್ತು ಕೂಲಿ ಕಾರ್ಮಿಕರು ಜಗಳವನ್ನು ಬಿಡಿಸಿದ್ದೇವೆ. ಆಸ್ತಿಸಂಬಂಧವಾಗಿ ಜಗಳ ಆಗಿರುತ್ತದೆ. ಚಾಸಾ-1 ಇವರನ್ನು ತರೀಕೆರೆಯ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ. ಮತ್ತು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಮು.ಮಾ-1 ನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಹೇಳಿದ ಜಮೀನಿನ ಕುರಿತು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಚಾಲ್ತಿಯಲ್ಲಿದೆ ಎಂದರೆ ಸರಿ. ಈ ಜಮೀನಿನ ವಿಷಯವಾಗಿ ನನ್ನ ಮತ್ತು ಆರೋಪಿತರ ನಡುವೆ ಸಂಬಧಗಳು ಚೆನ್ನಾಗಿಲ್ಲ ಎಂದರೆ ಸರಿ. ನಾನು ಚಾಸಾ-1 ಮತ್ತು ನಾನು ಸಾಮಾನ್ಯವಾಗಿ ಇದ್ದೇವೆ ಎಂದರೆ ಸರಿ. ಇಬ್ಬರ ನಡುವೆ ಯಾವುದೇ ಮನಸ್ತಾಪಗಳು ಇಲ್ಲ ಎಂದರೆ ಸರಿ. ನಾನು ಮೇಲೆ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ, ಆರೋಪಿತರು ಚಾಸಾ-1 ಇವರಿಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಅಥವಾ ಬೈದಿರುವುದಿಲ್ಲ ಎಂದರೆ ಸರಿಯಲ್ಲ, ಸಿವಿಲ್ ವ್ಯಾಜ್ಯ ಚಾಲ್ತಿಯಲ್ಲಿ ಇರುವ ಕಾರಣ ಆರೋಪಿಗಳ ಮೇಲಿನ ದ್ವೇಷದಿಂದ ಚಾಸಾ-1 ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಅವರು ನನ್ನ ಅತ್ತೆಯ ಮಗ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ :**</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

**ಸಹಿ/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**